**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 21.06.2021.

**1] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 107/2021 ಕಲಂ: 25 [1] (ಎ), 29 (ಎ) & (ಬಿ) ಐ.ಎ.ಆ್ಯಕ್ಟ.**

ದಿನಾಂಕ 20.06.2021 ರಂದು 15.00 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಮಹಾದೇವ ತಂ: ಅಣ್ಣೇಶ @ ಅಣ್ಣಾರಾಯ ಪಾಂಡ್ರೆ ವಯಾ: 37 ವರ್ಷ ಸಾ: ಲೋಣಿ ಕೆಡಿ ತಾ: ಇಂಡಿ 2] ಶರಣಬಸು ತಂ: ಸಿದ್ದಪ್ಪ ದೇಗಿನಾಳ ಸಾ: ಗುಂದಗಿ ತಾ: ಸಿಂದಗಿ ಇವರು ಸರಕಾರದಿಂದ ಯಾವುದೇ ಅನುಮತಿ ಪಡೆದುಕೊಳ್ಳದೇ ಒಂದು ಕಂಟ್ರಿ ಪಿಸ್ತೂಲ ಹಾಗೂ 4 ಜೀವಂತ ಗುಂಡುಗಳನ್ನು ಆರೋಪಿ ಅ.ನಂ: 2 ನೇದವನಿಂದ ತೆಗೆದುಕೊಂಡು ತನ್ನ ತಾಬಾದಲ್ಲಿ ಇಟ್ಟುಕೊಂಡಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಮಾಳಪ್ಪ ಪೂಜಾರಿ ಪೊಲೀಸ ಸಬ್‌ಇನ್ಸಪೆಕ್ಟರ. ಇಂಡಿ ಗ್ರಾಮೀಣ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.06.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಕೊಲ್ಹಾರ ಪೊಲೀಸ ಠಾಣೆ ಗುನ್ನಾ. ನಂ: 90/2021 ಕಲಂ: ಮಹಿಳೆ ಕಾಣೆ.**

ದಿನಾಂಕ 13.06.2021 ರಂದು 11.00 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ 1] ಶೃತಿ ಗಂಡ ರವಿ ಯರಂತೇಲಿ ವಯಾ-25 ವರ್ಷ 2] ವಿರಾಜ ತಂದೆ ರವಿ ಯರಂತೇಲಿ ವಯಾ-3 ವರ್ಷ ಸಾ: ಇಬ್ಬರೂ ಬಳೂತಿ ತಾ: ಕೊಲ್ಹಾರ ಇವಳು ತನ್ನ ಮಗ-ವಿರಾಜ ತಂದೆ ರವಿ ಯರಂತೇಲಿ ವಯಾ-3 ವರ್ಷ ಈತನಿಗೆ ತನ್ನ ಸಂಗಡ ಕರೆದುಕೊಂಡು ಮನೆಯಲ್ಲಿ ಸಂಡಾಸಕ್ಕೆ ಹೋಗಿ ಬರುತ್ತೆನೆಂದು ಹೇಳಿ ಹೋದವಳು ಮರಳಿ ಮನೆಗೂ ಬರದೆ ಅತ್ತ ತನ್ನ ತಂದೆ-ತಾಯಿ ಊರಿಗೂ ಹೋಗದೇ ಎಲ್ಲಿಯೋ ಹೋಗಿ ಕಾಣೆಯಾಗಿದ್ದು ಇರುತ್ತದೆ. ಈ ಬಗ್ಗೆ ರವಿ ತಂದೆ ಗುರಪ್ಪ. ಯರಂತೇಲಿ, ಸಾ: ಬಳೂತಿ ತಾ: ಕೊಲ್ಹಾರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.06,2021 ರಂದು ಕೊಲ್ಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಮನಗೂಳಿ ಪೊಲೀಸ ಠಾಣೆ ಗುನ್ನಾ. ನಂ: 75/2021 ಕಲಂ: 188, 269 ಐ.ಪಿ.ಸಿ & 87 ಕೆ.ಪಿ ಆ್ಯಕ್ಟ್.**

ದಿನಾಂಕ 20.06.2021 ರಂದು 5:50 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಮಾರುತಿ ಪುಂಡಲೀಕ ಗಾಯಕವಾಡ ಸಾ॥ ಮುಳವಾಡ. 2] ಮುತ್ತುರಾಜ ರಾವುಸಾಬ ಕೆಂಗನಾಳ ಸಾ॥ ಮುಳವಾಡ. 3] ಕಿರಣ ಮಹಾದೇವ ಗೆಣ್ಣೂರ ಸಾ॥ ಮುಳವಾಡ. 4] ಈರಣಗೌಡ ಭೀಮನಗೌಡ ಬಿರಾದಾರ ಸಾ॥ ಮುಳವಾಡ. 5] ಕಿರಣ ನಂದಪ್ಪ ಕೆಂಗನಾಳ ಸಾ॥ ಮುಳವಾಡ. 6) ಸಚಿನ ಸಾಹೇಬಗೌಡ ಬಿರಾದಾರ ಸಾ॥ಮುಳವಾಡ ಇವರು ಈಗ ಸಧ್ಯ ಕರೋನಾ ಸಾಂಕ್ರಾಮಿಕ ರೋಗವು (ಕೋವಿಡ್-19) ವ್ಯಾಪಕವಾಗಿ ಹರಡುತಿದ್ದರಿಂದ ರೋಗ ಹರಡದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದನ್ವಯ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರು ಜಿಲ್ಲೆಯಾದ್ಯಂತ ಸಾರ್ವಜನಿಕರು ಗುಂಪು, ಗುಂಪಾಗಿ ಕೂಡದಂತೆ, ಗುಂಪು ಸೇರದಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಮತ್ತು ಅಂಗಡಿ, ಹೊಟೇಲ, ದಾಬಾ ಬಂದ್ ಮಾಡಿ ಲಾಕ್‌ಡೌನ್ ಆದೇಶ ಮಾಡಿದ್ದರೂ ಸಹಿತ ಆರೋಪಿತರು ಮಾನ್ಯ ಕರ್ನಾಟಕ ರಾಜ್ಯ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಗುಂಪಾಗಿ ಕುಳಿತರೆ ಸಾಂಕ್ರಾಮಿಕ ರೋಗವು ಹರಡುವ ಸಂಭವ ಇದೆ ಅಂತ ತಿಳಿದು, ಗುಂಪಾಗಿ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯಿದೆಗೊಸ್ಕರ ಹಣವನ್ನು ಪಣಕ್ಕೆ ಹಚ್ಚಿ ಇಸ್ಪೇಟ್ ಎಲೆಗಳ ಸಹಾಯದಿಂದ ಅಂದರ-ಬಾಹರ ಅನ್ನುವ ಇಸ್ಪೇಟ ಜೂಜಾಟ ಆಡುತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಆರ್. ಬಿ. ಮಮದಾಪುರ ಪಿ.ಎಸ್.ಐ ಮನಗೂಳಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.06,2021 ರಂದು ಮನಗೂಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.